9

# ಆಂತರ್ಯದಲ್ಲಿ ವಾಸಿಸುವ ಪರಿಶುದ್ಧಾತ್ಮನು

*"ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬದು ನಿಮಗೆ ತಿಳಿಯದೋ? ನೀವು ನಿಮ್ಮ ಸ್ವಂತ ಸೊತ್ತಲ್ಲ; ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ" (1 ಕೊರಿಂಥ 6:19, 20).*

ಪರಿಶುದ್ಧಾತ್ಮನ ಆಂತರ್ಯದಲ್ಲಿ ವಾಸಿಸುವಿಕೆಯ ಬಗ್ಗೆ ಬೈಬಲ್ ಏನು ಹೇಳುತ್ತದೆ? ಆತ್ಮನು ಕೊಡಲ್ಪಡಬಹುದೋ? ಯಾರು ಆತ್ಮನನ್ನು ಸ್ವೀಕರಿಸುವರು? ಆತನು ಎಲ್ಲಾ ಕ್ರೈಸ್ತರಲ್ಲಿ ವಾಸಿಸುವನೋ? ಹಾಗಿದ್ದರೆ, ವಾಕ್ಯದ ಮುಖಾಂತರ ಮಾತ್ರವೇ ವಾಸಿ ಸುವನೋ, ವಾಕ್ಯದೊಂದಿಗೆ ವಾಸಿಸುವನೋ ಇಲ್ಲವೇ ವೈಯಕ್ತಿಕವಾಗಿ ಪ್ರತ್ಯೇಕವಾಗಿ ಮತ್ತು ವಾಕ್ಯವನ್ನು ಬಿಟ್ಟು ವಾಸಿಸುವನೋ? ಇಂದು ಆತನು ಆಂತರ್ಯದಲ್ಲಿವಾಸಿಸುವ ಉದ್ದೇಶವೇನು?

## ಆತ್ಮನು ಕೊಡಲ್ಪಡುವನು ಎಂದು ಬೈಬಲ್ ಹೇಳುತ್ತದೆಯೋ?

ಹೊಸ ಒಡಂಬಡಿಕೆಯಲ್ಲಿಯ ಹಲವಾರು ವಾಕ್ಯಭಾಗಗಳು ಪರಿಶುದ್ಧಾತ್ಮನು ಕೊಡಲ್ಪಡುವನು ಎಂದು ವಾಗ್ದಾನ ಮಾಡುತ್ತದೆ ಇಲ್ಲವೇ ಆತನು ಕೊಡಲ್ಪಟ್ಟಿದ್ದಾನೆ ಎಂದು ಹೇಳುತ್ತವೆ. ನಮ್ಮ ಅಧ್ಯಯನದ ಈ ಭಾಗದ ಪ್ರಾಥಮಿಕ ಉದ್ದೇಶವು ಆತನು ಕೊಡಲ್ಪಡಬಹುದು ಎಂದು ತೋರಿಸುವುದಾಗಿದೆ.

(1) "ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿಶುದ್ಧಾತ್ಮನನ್ನು ಕೊಡುವನಲ್ಲವೇ" (ಲೂಕ 11:13ಬಿ). ಈ ವಾಕ್ಯ ಭಾಗದಲ್ಲಿ ಯೇಸುವು ತಾನು ಮಾತಾಡುತ್ತಿರುವ ಶಿಷ್ಯರಿಗೆ ಮಾತ್ರ ಅನ್ವಯಿಸಿ "ನೀವು" ಎಂದು ಹೇಳಲಿಲ್ಲ, ಆದರೆ ಬೇಡಿಕೊಳ್ಳುವ ಯಾರೇ ಆಗಲಿ ಎಂದು ಅರ್ಥಬರುವಂತೆ "ಅವರಿಗೆ," ಎಂದು ಹೇಳಿದ್ದಾನೆ.

(2) "ಆತನು ಅಳತೆಮಾಡದೆ ಆತ್ಮನನ್ನು ಅನುಗ್ರಹಿಸುವನು" (ಯೋಹಾನ 3:34ಬಿ). ಗ್ರೀಕದಲ್ಲಿ ಕಂಡು ಬರದ "ಆತನಿಗೆ" ಎಂಬುದು ಓರೆ ಅಕ್ಷರಗಳಲ್ಲಿ KJV ಕೂಡಿಸುತ್ತದೆ. ಈ ವಚನವು ಆತ್ಮವು ಕೊಡಲ್ಪಡುತ್ತದೆ ಎಂದು ಹೇಳುತ್ತದೆ ಆದರೆ ಆತ್ಮವು ಯಾರಿಗೆ ಕೊಡಲ್ಪಡುತ್ತದೆ ಎಂದು ಹೇಳುವದಿಲ್ಲ.

(3) "ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. ಆ ಸಹಾಯಕನು ಯಾರಂದರೆ ಸತ್ಯದ ಆತ್ಮನೇ" (ಯೋಹಾನ 14:16, 17ಎ). ಈ

ಸಂದರ್ಭದಲ್ಲಿ ಪವಿತ್ರಾತ್ಮನು (ಸಹಾಯಕನು) ಅವರಿಗೆ ಕೊಡಲ್ಪಡುವನು ಎಂದು ಹೇಳುವಲ್ಲಿ, ಯೇಸುವು ಅಪೊಸ್ತಲರಿಗೆ ಮಾತ್ರವೇ ಮಾತಾಡುತ್ತಿದ್ದನು.

(4) "... 'ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ನಿಮ್ಮಲ್ಲಿ ಪ್ರತಿಯೊಬ್ಬರು ದೇವರ ಕಡೆಗೆ ತಿರುಗಿಕೊಂಡು ಯೇಸು ಕ್ರಿಸ್ತನ ಹೆಸರಿನ ಮೇಲೆ ಬಾಪ್ತಿಸ್ಮ ಮಾಡಿಸಿಕೊಳ್ಳಿರಿ, ಆಗ ನೀವು ಪವಿತ್ರಾತ್ಮವೆಂಬ ವರವನ್ನು ಹೊಂದುವಿರಿ" ' (ಅಪೊಸ್ತಲರ ಕೃತ್ಯಗಳು 2:38).

(5) "ಈ ಕಾರ್ಯಗಳಿಗೆ ನಾವು ಸಾಕ್ಷಿ; ದೇವರು ತನಗೆ ವಿಧೇಯರಾಗುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ ಸಾಕ್ಷಿ" (ಅಪೊಸ್ತಲರ ಕೃತ್ಯಗಳು 5:32). ಪೇತ್ರನು ಕೇವಲ ಅಪೊಸ್ತಲರಿಗೆ ಸಂಬಂಧಿಸಿ "ನಾವು" ಎಂದು ಹೇಳಲಿಲ್ಲ, ಆದರೆ ಆತನಿಗೆ ವಿಧೇಯರಾಗುವವರೆಲ್ಲರೂ ಪವಿತ್ರಾತ್ಮನನ್ನು ಸ್ವೀಕರಿಸುವರು ಎಂಬರ್ಥದಲ್ಲಿ "ವಿಧೇಯರಾಗುವವರಿಗೆ" ಎಂದು ಹೇಳಿದ್ದಕ್ಕೆ ಮಹತ್ವವನ್ನು ಕೊಡತಕ್ಕದ್ದು.

(6) "... ನಮಗೆ ಕೊಟ್ಟಿರುವ ಪವಿತ್ರಾತ್ಮ ಮೂಲಕ ..." (ರೋಮಾಪುರ 5:5), ಈ ವಚನದಲ್ಲಿ "ನಮಗೆ" ಎಂಬುದು ರೋಮಾಪುರದವರಿಗೆ ಬರೆದ ಪತ್ರಿಕೆಯ ಈ ಭಾಗದಲ್ಲಿಯ ಇತರ ವೈಯಕ್ತಿಕ ಸರ್ವನಾಮಗಳು ಕೇವಲ ಅಪೊಸ್ತಲರಿಗೆ ಮಾತ್ರ ಸಂಬಂಧಿಸಿರುವಂತೆ ಹೆಚ್ಚಾಗಿ ಸಂಬಂಧಿಸಿರುವದಿಲ್ಲ. "ನಮಗೆ" (5:8), "ನಮ್ಮ" (4:24, 25; 5:3), ಮತ್ತು "ನಾವು" (5:1-3, 6, 8-11) ಎಂಬವುಗಳು ಈ ಹಿನ್ನೆಲೆಯಲ್ಲಿ ಪೌಲ, ರೋಮನ್ ಕ್ರೈಸ್ತರು, ಸಾಮಾನ್ಯವಾಗಿ ಕ್ರೈಸ್ತರು, ಇವರಿಗೆ ಸಂಬಂಧಿಸಿರುತ್ತದೆ.

(7) "... ಪವಿತ್ರಾತ್ಮನನ್ನು ನಮ್ಮ ಹೃದಯಗಳಲ್ಲಿ ಕೊಟ್ಟನು ..." (2 ಕೊರಿಂಥ 1:22).

(8) "ದೇವರು ... ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು" (ಗಲಾತ್ಯ 4:6). "ಆತನ ಕುಮಾರನ [ಕ್ರಿಸ್ತನ] ಆತ್ಮವನ್ನು" ಎಂಬುದು ಪವಿತ್ರಾತ್ಮನಿಗೆ ಸಂಬಂಧಿಸಿದೆ (1 ಪೇತ್ರ 1:11), ಆತನು ದೇವರ ವಾಕ್ಯವನ್ನು ಹಳೇ ಒಡಂಬಡಿಕೆಯ ಅವಧಿಯಲ್ಲಿ ಪ್ರಕಟಿಸಿದನು (ಅಪೊಸ್ತಲರ ಕೃತ್ಯಗಳು 1:16; 2 ಪೇತ್ರ 1:20, 21).

(9) "... ತನ್ನ ಪವಿತ್ರಾತ್ಮನನ್ನು ನಿಮಗೆ ಕೊಡುವ ದೇವರನ್ನು ..." (1 ಥೆಸಲೊನೀಕ 4:8). ಕೆಲವು ಕೈಬರಹ ಪ್ರತಿಗಳಲ್ಲಿ "ನಿಮಗೆ" ಎಂಬುದರ ಬದಲು "ನಮಗೆ" ಎಂದಿರುತ್ತದೆ. ಇದು ಮಹತ್ವವುಳ್ಳದ್ದಾಗಿದೆ, ಯಾಕಂದರೆ ಈ ವಾಕ್ಯದಲ್ಲಿ "ನಮಗೆ" ಎಂಬುದು ಪೌಲನನ್ನೂ ಹಾಗೆಯೇ ಥೆಸಲೊನೀಕದಲ್ಲಿ ಇರುವವರನ್ನೂ ಒಳಗೊಂಡಿರುತ್ತದೆ (ನೋಡಿರಿ ವಚನ 7, ಅಲ್ಲಿ "ನಮಗೆ" ಎಂಬುದು ಕಂಡುಬರುತ್ತದೆ).[1]

"ಪವಿತ್ರಾತ್ಮ ವರವು" ಅನ್ಯರ ಮೇಲೆ ಸುರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 10:45; ನೋಡಿರಿ 11:17). ಪವಿತ್ರಾತ್ಮನ "ಒಂದು" ವರವನ್ನು ಅವರು ಸ್ವೀಕರಿಸಿದ್ದರು ಎಂದು ಲೂಕನು ದಾಖಲೆ ಮಾಡುವದಿಲ್ಲ (ಹಾಗೆ ಮಾಡಿದ್ದರೆ, ಆತ್ಮಿಕ ವರಗಳಲ್ಲಿ ಒಂದಾದ ವಾಣಿಗಳನ್ನಾಡುವದಕ್ಕೆ ಉಲ್ಲೇಖವಾಗುತ್ತಿತ್ತು; 1 ಕೊರಿಂಥ 12:4, 10, 11). ಅವನು "the" ಪವಿತ್ರಾತ್ಮ ವರವನ್ನು ಅವರು ಸ್ವೀಕರಿಸಿದ್ದರು ಎಂದು ಹೇಳಿದನು. "ಪವಿತ್ರಾತ್ಮ ವರವನ್ನು" ಅವರು ಸ್ವೀಕರಿಸಿದ್ದರು ಎಂದು ಪೇತ್ರನು ವ್ಯಾಖ್ಯಾನಿಸಿದ್ದಾನೆ (ಅಪೊಸ್ತಲರ ಕೃತ್ಯಗಳು 10:47) - ("the same gift") - ಅಪೊಸ್ತಲರು ಸ್ವೀಕರಿಸಿದ್ದ "ಅದೇ ವರವು" (ಅಪೊಸ್ತಲರ ಕೃತ್ಯಗಳು 11:17) - ಅವರಿಗೂ "ಪವಿತ್ರಾತ್ಮನು"

ಕೊಡಲ್ಪಟ್ಟಿದ್ದನು (ಅಪೊಸ್ತಲರ ಕೃತ್ಯಗಳು 15:8). ಇಲ್ಲಿ "ಪರಿಶುದ್ಧಾತ್ಮ ವರವು" ಪರಿಶುದ್ಧಾತ್ಮನೇ ಆಗಿದ್ದಾನೆಂಬುದು ಸ್ಪಷ್ಟವಾಗಿದೆ, ಯಾಕಂದರೆ ಆತನು ಕೊಡಲ್ಪಟ್ಟಿದ್ದರೆ, ಆಗ ಆತನು ಅವರು ಸ್ವೀಕರಿಸಿದ ವರವಾಗಿದ್ದಾನೆ.

ಅಪೊಸ್ತಲರ ಕೃತ್ಯಗಳು 2:38ರಲ್ಲಿ, "ಪರಿಶುದ್ಧಾತ್ಮನ ವರ" ಎಂಬ ಅದೇ ಮಾತು ಉಪಯೋಗಿಸಲ್ಪಟ್ಟದ್ದರಿಂದ "ಪರಿಶುದ್ಧಾತ್ಮನ ವರ" ಎಂಬುದು ಎರಡೂ ಕಡೆಗಳಲ್ಲಿ ಭಿನ್ನವಾಗಿ ಉಪಯೋಗಿಸಲ್ಪಟ್ಟಿದೆ ಯಾಕೆ ಎಂಬುದಕ್ಕೆ ಯೋಚಿಸಲಿಕ್ಕೆ ಕಾರಣವಿಲ್ಲ. ಅಂಥ ತೀರ್ಮಾನವು ಬೈಬಲಿನ ಇತರ ಬೋಧನೆಗಳಿಗೆ ವ್ಯತಿರಿಕ್ತವಾಗಿರದಿದ್ದರೆ - ವರವು ಪರಿಶುದ್ಧಾತ್ಮನಂತೆ ತಿಳಿಯಲ್ಪಡ ಬಹುದು - ಆದರೆ ಪರಿಶುದ್ಧಾತ್ಮನಿಂದ ಬೇರೆ ಯಾವುದೋ ವರದಂತೆ ಅಲ್ಲ. ಪಾಪಗಳ ಕ್ಷಮಾಪಣೆಗಾಗಿ ಬಾಪ್ತಿಸ್ಮ ಹೊಂದಿದ ಎಲ್ಲರಿಗೂ ಅದ್ಭುತಕರವಾದ ಬಲಗಳು ಕೊಡಲ್ಪಟ್ಟವೆಂದು ಇದರ ಅರ್ಥವಲ್ಲ, ಆದರೆ ಅವರು ಪರಿಶುದ್ಧಾತ್ಮನನ್ನು ಸ್ವೀಕರಿಸಿದರೆಂದು ಮಾತ್ರ ಅರ್ಥವಾಗುತ್ತದೆ. ಈ ವಾಕ್ಯಭಾಗದಲ್ಲಿ "ಪರಿಶುದ್ಧಾತ್ಮ ವರವು" ವಾಣಿಗಳನ್ನಾಡುವದಕ್ಕೆ ಸಂಬಂಧಿಸಿದರೆ, ಆಗ ಅಪೊಸ್ತಲರ ಕೃತ್ಯಗಳು 2:38ರಲ್ಲಿ "ಪರಿಶುದ್ಧಾತ್ಮನ ವರವು" ಅದೇ ಅರ್ಥ ಯಾಕೆ ಕೊಡಬಾರದು?

> ಪರಿಶುದ್ಧಾತ್ಮನ *ವರ* ಎಂಬುದನ್ನು ನಾವು ಪರಿಶುದ್ಧಾತ್ಮನ *ವರಗಳು* ಎಂಬುದರಿಂದ ಭಿನ್ನಾವಾಗಿ ನೋಡತಕ್ಕದ್ದು. ಪರಿಶುದ್ಧಾತ್ಮನ *ವರವು* ಪರಿಶುದ್ಧಾತ್ಮನು ತಾನೇ ಆಗಿದ್ದಾನೆ, ಮೆಸ್ಸೀಯನ ಮುಖಾಂತರ ತಂದೆಯಿಂದ ಕೊಡಲ್ಪಟ್ಟಿದ್ದಾನೆ; ಪರಿಶುದ್ಧಾತ್ಮನ *ವರಗಳು* ಪರಿಶುದ್ಧಾತ್ಮನು ಕೊಡುವ ಆತ್ಮಿಕ ಶಕ್ತಿಗಳಾಗಿವೆ, ...[2]

ಅಪೊಸ್ತಲರ ಕೃತ್ಯಗಳು 2:38ರಲ್ಲಿಯ "ಪರಿಶುದ್ಧಾತ್ಮನ ವರ" ಎಂಬ ಮಾತಿನ ಮೇಲೆ J. W. McGarvey ಈ ಟಿಪ್ಪಣಿ ಮಾಡಿದ್ದಾರೆ:

> ಇದರಿಂದ ಅಪೊಸ್ತಲರ ಮೇಲೆ ಈಗಲೇ ಕೊಡಲ್ಪಟ್ಟ ಅದ್ಭುತಕರವಾದ ವರ ಎಂದು ಅರ್ಥವಾಗುವದಿಲ್ಲ: ಯಾಕಂದರೆ ಅನಂತರದ ಚರಿತ್ರೆಯಿಂದ, ಈ ವರವು ಮಾನಸಾಂತರ ಹೊಂದಿ ಬಾಪ್ತಿಸ್ಮ ಮಾಡಿಸಿಕೊಂಡ ಎಲ್ಲರ ಮೇಲೆಯು ಕೊಡಲ್ಪಡಲಿಲ್ಲ, ಆದರೆ ಹಲವಾರು ಸಭೆಗಳಲ್ಲಿ ಪ್ರಾಧಾನ್ಯತೆ ಹೊಂದಿದ ಕೆಲವೇ ಸಹೋದರರ ಮೇಲೆ ಕೊಡಲ್ಪಟ್ಟಿತು ಎಂದು ನಾವು ತಿಳಿದು ಕೊಂಡಿದ್ದೇವೆ. ಈ ವ್ಯಕ್ತಪಡಿಸುವಿಕೆಯ ಅರ್ಥ ಪರಿಶುದ್ಧಾತ್ಮನು ಒಂದು ವರದಂತೆ ಎಂದಾಗುತ್ತದೆ; ಮತ್ತು ಉಲ್ಲೇಖವು ಆತ್ಮನ ಫಲಗಳನ್ನು ನಾವು ತರುವ ಪರಿಶುದ್ಧಾತ್ಮನ ಆಂತರ್ಯದ ನೆಲೆಗೊಂಡಿರುವಿಕೆಗೆ ಸಂಬಂಧಿಸಿದೆ ಮತ್ತು ಅದಿಲ್ಲದಿದ್ದರೆ ನಾವು ಕ್ರಿಸ್ತನವರಾಗುವದಿಲ್ಲ.[3]

ಪರಿಶುದ್ಧಾತ್ಮನು ಅಪೊಸ್ತಲರೊಂದಿಗೆ ಇದ್ದನು (ಯೋಹಾನ 14:17) ಆದರೆ ಯೇಸುವಿನ ವೈಯಕ್ತಿಕ ಸೇವೆಯ ಸಮಯದಲ್ಲಿ ಅವರಲ್ಲಿ ಇರಲಿಲ್ಲ (ಯೋಹಾನ 7:39).

## ಆತ್ಮನು ಯಾರಿಗೆ ಕೊಡಲ್ಪಟ್ಟಿದ್ದಾನೆ?

ಕ್ರೈಸ್ತ ಯುಗದಲ್ಲಿ, ದೇವರು ಪರಿಶುದ್ಧಾತ್ಮನನ್ನು ನಿಶ್ಚಿತವಾದ ಜನಾಂಗಕ್ಕೆ ಮಾತ್ರ

ಕೊಡುತ್ತಾನೆ. ಅಪೊಸ್ತಲರಿಗೆ (ಯೋಹಾನ 14:17, 26; 15:26; 16:13) ಮತ್ತು ಅದ್ಭುತಕಾರ್ಯಗಳನ್ನು ಮಾಡಿದವರಿಗೆ (ಅಪೊಸ್ತಲರ ಕೃತ್ಯಗಳು 19:6). ಪರಿಶುದ್ಧಾತ್ಮನು ಕೊಡಲ್ಪಟ್ಟನು ಎಂಬ ಸಂಗತಿಯು ಬೈಬಲಿನ ಹೆಚ್ಚಾದ ವಿದ್ಯಾರ್ಥಿಗಳಿಗೆ ಸಮಸ್ಯೆಯಾಗಿರುವದಿಲ್ಲ. ಹೀಗಿದ್ದರೂ, ಅದ್ಭುತಕರವಲ್ಲದ ಅರ್ಥದಲ್ಲಿ "ಇತರರಿಗೆ ಪರಿಶುದ್ಧಾತ್ಮನನ್ನು ಕೊಟ್ಟನೋ - ಮತ್ತು, ಹಾಗಿದ್ದರೆ, ಯಾರಿಗೆ?" ಎಂದು ನಾವು ಕೇಳಬಹುದು. ಈ ಇಮ್ಮಡಿ ಪ್ರಶ್ನೆಗೆ ಈ ಕೆಳಗಿನ ಪರಿಶುದ್ಧ ಬರಹಗಳು ಉತ್ತರಕೊಡುತ್ತವೆ:

(1) "... ಸತ್ಯದ ಆತ್ಮನೇ, ಲೋಕವು ಆತನನ್ನು ಹೊಂದಲಾರದು" (ಯೋಹಾನ 14:17ಎ). "ಲೋಕ" ಎಂಬದರಿಂದ ದುಷ್ಟನ ಅಧಿಕಾರದೊಳಗೆ ಇರುವವರು ಎಂದು ಯೇಸು ಹೇಳಿದನು (1 ಯೋಹಾನ 4:5, 6; 5:19). ಕ್ರೈಸ್ತರು, ಲೋಕದವರಲ್ಲದವರು, ಪರಿಶುದ್ಧಾತ್ಮನನ್ನು ಹೊಂದಿಕೊಳ್ಳುವರು ಎಂದು ಅನ್ವಯಿಸಿದನು.

(2) "... ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ ಹೆಚ್ಚಾಗಿ ಪರಿಶುದ್ಧಾತ್ಮ ವರವನ್ನು ಕೊಡುವನಲ್ಲವೇ" (ಲೂಕ 11:13).

(3) "ಇದನ್ನು ಯೇಸು ತನ್ನನ್ನು ನಂಬಿದವರು ಹೊಂದಲಿರುವ ಪರಿಶುದ್ಧಾತ್ಮ ವರವನ್ನು ಕುರಿತು ಹೇಳಿದನು" (ಯೋಹಾನ 7:39ಎ). ಈ ವಾಕ್ಯದಲ್ಲಿ ಪರಿಶುದ್ಧಾತ್ಮನನ್ನು ಸ್ವೀಕರಿಸಿದವರು "ನಂಬಿದ್ದವರು" ಆಗಿದ್ದಾರೆ (ಅಂದರೆ ವಿಧೇಯರಾದವರು; ರೋಮಾಪುರ 1:5; 16:26), ಇದು ಅಪೊಸ್ತಲರಗಿಂತ ವಿಶಾಲವಾದ ಗುಂಪನ್ನು ಒಳಗೊಂಡಿರುತ್ತದೆ.

(4) "ನಿಮ್ಮ ಪಾಪಗಳು ಪರಿಹಾರವಾಗುವದಕ್ಕಾಗಿ ... ಬಾಪ್ತಿಸ್ಮ ಮಾಡಿಸಿಕೊಳ್ಳಿರಿ; ಆಗ ನೀವು ಪರಿಶುದ್ಧಾತ್ಮ ದಾನವನ್ನು ಹೊಂದುವಿರಿ" (ಅಪೊಸ್ತಲರ ಕೃತ್ಯಗಳು 2:38).

(5) "... ದೇವರು ತನಗೆ ವಿಧೇಯರಾಗಿರುವವರಿಗೆ ದಯಪಾಲಿಸಿರುವ ಪರಿಶುದ್ಧಾತ್ಮನೂ ಸಾಕ್ಷಿ ..." (ಅಪೊಸ್ತಲರ ಕೃತ್ಯಗಳು 5:32).

(6) "ನೀವು ಪುತ್ರರಾಗಿರುವದರಿಂದ ದೇವರು ... ತನ್ನ ಮಗನ ಆತ್ಮನನ್ನು ನಮ್ಮ ಹೃದಯಗಳಲ್ಲಿ ಕಳುಹಿಸಿಕೊಟ್ಟನು, ..." (ಗಲಾತ್ಯ 4:6).

(7) "... ನೀವು ದೇವರಾತ್ಮನನ್ನು ಹೊಂದಿದ್ದು ಧರ್ಮಶಾಸ್ತ್ರದ ನೇಮನಿಷ್ಠೆಗಳನ್ನು ಅನುಸರಿಸಿದ್ದರಿಂದಲೋ? ಕೇಳಿ ನಂಬಿದ್ದರಿಂದಲೋ?" (ಗಲಾತ್ಯ 3:2). ದೇವರ ವಾಕ್ಯವನ್ನು ಕೇಳಿದಾಗ ಅದನ್ನು ನಂಬಿಕೆಯಿಂದ ಸ್ವೀಕರಿಸಲು ಮನಸ್ಸುಳ್ಳವರಾದವರಿಂದ ಪರಿಶುದ್ಧಾತ್ಮನು ಸ್ವೀಕರಿಸಲ್ಪಟ್ಟನೆಂದು ಪರಿಶುದ್ಧ ಬರಹವು ಪ್ರಕಟಿಸುತ್ತದೆ.

ಲೋಕವು ಪರಿಶುದ್ಧಾತ್ಮನನ್ನು ಸ್ವೀಕರಿಸಲಾರದು ಎಂಬುದು ಸಾಮಾನ್ಯ ನಿಯಮ. ಕೇಳುವವರಿಗೆ ಪರಿಶುದ್ಧಾತ್ಮನು ಕೊಡಲ್ಪಟ್ಟಿದ್ದಾನೆ; ಹಾಗಿದ್ದರೂ ಪರಿಶುದ್ಧಾತ್ಮನಿಗಾಗಿ ಕೇಳುವುದಷ್ಟೇ ಪರಿಶುದ್ಧಾತ್ಮನನ್ನು ಸ್ವೀಕರಿಸಲು ಅಗತ್ಯವಾದದ್ದಾಗಿರಲಿಲ್ಲ. ನಂಬಿಕೆ, ಮಾನಸಾಂತರ ಮತ್ತು ಪಾಪಗಳ ಕ್ಷಮಾಪಣೆಗಾಗಿ ಯೇಸುವಿನ ಹೆಸರಿನಲ್ಲಿ ಬಾಪ್ತಿಸ್ಮ ಇವುಗಳನ್ನೊಳಗೊಂಡ ವಿಧೇಯತೆಯು ಅಗತ್ಯವಾಗಿತ್ತು (ಅಪೊಸ್ತಲರ ಕೃತ್ಯಗಳು 5:32).

ಅನ್ಯರು ದೇವರ ಮಕ್ಕಳಾಗುವ ಮೊದಲು ಮತ್ತು ಅಪೊಸ್ತಲರ ಹಸ್ತಗಳು ಇಡಲ್ಪಡದೇ ಪರಿಶುದ್ಧಾತ್ಮ ಬಲಪಡಿಸುವಿಕೆಯನ್ನು ಹೊಂದಿ ಕೊಂಡರು (ಸಾಮಾನ್ಯ ನಿಯಮಕ್ಕೆ ಹೊರತು ಪಡಿಸಿ); ಹೀಗಿದ್ದರೂ, ಬಾಪ್ತಿಸ್ಮ ಹೊಂದುವದರಿಂದ ಅವರು ದೇವರ ಮಕ್ಕಳಾಗುವದಕ್ಕಿಂತ ಮೊದಲು ಪರಿಶುದ್ಧಾತ್ಮನ ನೆಲೆಗೊಂಡಿರುವಿಕೆಯು ಅವರಿಗೆ

ಇತ್ತು ಎಂಬುದಕ್ಕೆ ಯಾವ ಸೂಚನೆ ಯಿರುವದಿಲ್ಲ. ಮಾನಸಾಂತರ, ಬಾಪ್ತಿಸ್ಮ ಮತ್ತು ಪಾಪಗಳ ಪರಿಹಾರದ ನಂತರ ಪರಿಶುದ್ಧಾತ್ಮನ ವರವನ್ನು ಸ್ವೀಕರಿಸು ವರ ಸಾಮಾನ್ಯ ನಿಯಮವು (ಅಪೊಸ್ತಲರ ಕೃತ್ಯಗಳು 2:38) ಅವರಿಗೂ ಅನ್ವಯಿಸುವುದು, ಪರಿಶುದ್ಧಾತ್ಮ ವರವು ನಮೂದಿಸದೇ ಇರುವ, ಅಪೊಸ್ತಲರ ಕೃತ್ಯಗಳ ಗ್ರಂಥದಲ್ಲಿಯ ಮಾರ್ಪಟ್ಟಿರುವ ವಿಷಯದಲ್ಲಿಯೂ ಅನ್ವಯವಾಗಿದೆ (ಅಪೊಸ್ತಲರ ಕೃತ್ಯಗಳು 8:35-39; 16:15, 33; 18:8). ಪರಿಶುದ್ಧಾತ್ಮನಲ್ಲಿಯ ಬಾಪ್ತಿಸ್ಮದ ಎರಡು ಸಂಗತಿಗಳನ್ನು ಬಿಟ್ಟು, ಪರಿಶುದ್ಧಾತ್ಮನ ಬಲಪಡಿಸುವಿಕೆಯು ಅಪೊಸ್ತಲರ ಹಸ್ತಗಳನ್ನಿಡುವಿಕೆಯ ಮುಖಾಂತರ ಕೊಡಲ್ಪಟ್ಟಿದೆ ಎಂದು ದಾಖಲೆಯಾಗಿದೆ (ಅಪೊಸ್ತಲರ ಕೃತ್ಯಗಳು 8:14-18; 19:5, 6; 2 ತಿಮೊಥೆ 1:6).[4]

## ಆತ್ಮನು ಕ್ರೈಸ್ತರಲ್ಲಿ ವಾಸಿಸುವನೋ?

ಆತ್ಮನು ನಮಗೆ ಕೊಡಲ್ಪಟ್ಟಿದ್ದರೆ, ಆಗ ನಮಗೆ ಆತ್ಮನಿರತಕ್ಕದ್ದು. "... ಯಾವನಿಗಾದರೂ ಕ್ರಿಸ್ತನ ಆತ್ಮನು ಇಲ್ಲದಿದ್ದರೆ ಅವನು ಕ್ರಿಸ್ತನವನಲ್ಲ" (ರೋಮಾಪುರ 8:9ಬಿ) ಎಂದು ಪೌಲನು ಬರೆದಿದಾದ್ದನೆ. "... ದೇವರಿಂದ ದೊರಕಿ ನಿಮ್ಮೊಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನಿಗೆ ..." (1 ಕೊರಿಂಥ 6:19) ಎಂದು ಸಹ ಆತನು ಬರೆದನು. "ಪರಿಶುದ್ಧಾತ್ಮ ವರದಲ್ಲಿ ಪಾಲುಗಾರರಾಗಿ ಮಾಡಲ್ಪಟ್ಟಿದ್ದೇವೆ" ಎಂದು ಇಬ್ರಿಯರಿಗೆ ಬರೆದ ಪತ್ರಿಕೆಯಲ್ಲಿ ಓದುತ್ತೇವೆ (6:4). ನಮಗೆ ಆತ್ಮನು ಇದ್ದರೆ ಹಾಗೂ ನಾವು ಆತ್ಮನ ಪಾಲುಗಾರರಾಗಿ ಮಾಡಲ್ಪಟ್ಟರೆ ಆಗ ಆತನು ನಮ್ಮಲ್ಲಿ ಇದ್ದಿರತಕ್ಕದ್ದು.

ಕ್ರೈಸ್ತರಲ್ಲಿ ಪರಿಶುದ್ಧಾತ್ಮನ ನೆಲೆಗೊಂಡಿರುವಿಕೆಯ ಬಗ್ಗೆ ಕೆಳಗಿನ ವಾಕ್ಯಗಳು ಕೆಲವು ಪ್ರಶ್ನೆಗಳಿಗೆ ಉತ್ತರಕೊಡುವವು:

(1) "ನೀವಾದರೋ ನಿಮ್ಮಲ್ಲಿ ದೇವರ ಆತ್ಮನು ನಿವಾಸವಾಗಿರುವದಾದರೆ ಶರೀರ ಭಾವಾಧೀನರಲ್ಲ" (ರೋಮಾಪುರ 8:9ಎ).

(2) "ಯೇಸುವನ್ನು ಸತ್ತವರೊಳಗಿಂದ ಜೀವಿತನಾಗಿ ಎಬ್ಬಿಸಿದಾತನ ಆತ್ಮನು ನಿಮ್ಮಲ್ಲಿ ವಾಸವಾಗಿದ್ದರೆ ಕ್ರಿಸ್ತ ಯೇಸುವನ್ನು ಸತ್ತವರೊಳಗಿಂದ ಎಬ್ಬಿಸಿದಾತನು ನಿಮ್ಮಲ್ಲಿ ವಾಸವಾಗಿರುವ ತನ್ನ ಆತ್ಮನ ಮೂಲಕ ನಿಮ್ಮ ಮರ್ತ್ಯ ದೇಹಗಳನ್ನು ಸಹ ಬದುಕಿಸುವನು" (ರೋಮಾಪುರ 8:11).

(3) "ನೀವು ದೇವರ ಆಲಯವಾಗಿದ್ದೀರೆಂದೂ ದೇವರ ಆತ್ಮನು ನಿಮ್ಮಲ್ಲಿ ವಾಸ ಮಾಡುತ್ತಾನೆಂದೂ ನಿಮಗೆ ಗೊತ್ತಿಲ್ಲವೋ?" (1 ಕೊರಿಂಥ 3:16).

(4) "... ನಿಮ್ಮೊಳಗೆ ನೆಲೆಗೊಂಡಿರುವ ಪರಿಶುದ್ಧಾತ್ಮನಿಗೆ ನಿಮ್ಮ ದೇಹವು ಗರ್ಭಗುಡಿಯಾಗಿದೆಂಬದು ನಿಮಗೆ ತಿಳಿಯದೋ?" (1 ಕೊರಿಂಥ 6:19).

(5) "ಆತನಲ್ಲಿ ನೀವು ಸಹ ಪರಿಶುದ್ಧಾತ್ಮನ ಮೂಲಕವಾಗಿ ದೇವರಿಗೆ ನಿವಾಸಸ್ಥಾನ ವಾಗುವದಕ್ಕಾಗಿ ನಮ್ಮ ಸಂಗಡ ಕಟ್ಟಲ್ಪಡುತ್ತಾ ಇದ್ದೀರಿ" (ಎಫೆಸ 2:22). ಆತ್ಮ"ನಲ್ಲಿ" (ಗ್ರೀಕ: *en*) ಎಂಬುದರ ಇತರ ಸಾಧ್ಯವಾದ ಭಾಷಾಂತರಗಳು "ಮುಖಾಂತರ" KJV ಹಾಗೂ "ನಿಂದ" (NIV) ಎಂದಾಗುತ್ತವೆ - ಇದರ ಅರ್ಥ ಆತ್ಮನು ನಮ್ಮಲ್ಲಿರುತ್ತಾನೆ ಮತ್ತು ದೇವರು ಆತ್ಮನಲ್ಲಿರುವನು ಎಂಬುದು.

(6) "... ನಮ್ಮಲ್ಲಿ ವಾಸವಾಗಿರುವ ಪರಿಶುದ್ಧಾತ್ಮನ ಮೂಲಕ ಕಾಪಾಡು" (2 ತಿಮೊಥೆ 1:14ಎ).

(7) "ದೇವರು ನಮ್ಮಲ್ಲಿ ಇರಿಸಿರುವ ಪರಿಶುದ್ಧಾತ್ಮನು ಅಭಿಮಾನ ತಾಪದಿಂದ

ನಮಗೋಸ್ಕರ ಹಂಬಲಿಸುತ್ತಾನೆ" (ಯಾಕೋಬ 4:5ಬಿ). ಈ ವಾಕ್ಯಭಾಗದಲ್ಲಿಯ "ಆತ್ಮನು" ಮಾನವ ಆತ್ಮಕ್ಕೆ ಸಂಬಂಧಿಸಿರಬಹುದು (ನೋಡಿರಿ KJV ಮತ್ತು RSV). ಗ್ರೀಕ ಭಾಷೆಯಲ್ಲಿ ಕ್ಯಾಪಿಟಲ್ ಅಕ್ಷರಗಳು ಇಲ್ಲದ್ದರಿಂದ, "spirit" ಇಲ್ಲವೇ "Spirit" ಎಂದು ಭಾಷಾಂತರಿಸಲು ನಿರ್ಧರಿಸುವದಕ್ಕಾಗಿ ಬೈಬಲಿನ ತಕ್ಷಣದ ಇಲ್ಲವೇ ವಿಶಾಲವಾದ ಹಿನ್ನೆಲೆಯ ಅಗತ್ಯತೆಯಿರುತ್ತದೆ. ಬಹುಶಃ, ಈ ವಾಕ್ಯಭಾಗವು ಎಲ್ಲಾ ಮಾನವರಿಗಿರುವ ಆತ್ಮಕ್ಕೆ ಸಂಬಂಧಿಸಿರುತ್ತದೆ.

ಪರಿಶುದ್ಧಾತ್ಮನು ನಮ್ಮಲ್ಲಿ ವಾಸಿಸುವನು ಎಂಬ ಸಂಗತಿಯನ್ನು ಅಲ್ಲಗಳೆಯುವುದು ಕಠಿಣವಾದದ್ದಾಗಿದೆ (2 ಕೊರಿಂಥ 1:22). ಬೈಬಲಿನಲ್ಲಿ ಉಪಯೋಗಿಸಿದಂತೆ "ಹೃದಯ" ಎಂಬ ಪದವು ನಮ್ಮ ಆಂತರಿಕ ಬುದ್ಧಿವಂತಿಕೆಯ ನಿಯಂತ್ರಣ ಕೇಂದ್ರಕ್ಕೆ ಸಂಬಂಧಿಸಿರುತ್ತದೆ, ಅದು ವಿವಿಧ ಮಾನಸಿಕ ಚಟುವಟಿಕೆಗಳ ಮತ್ತು ಭಾವನೆಗಳ ಪೀಠವಾಗಿದೆ:

| | |
|---|---|
| ತಿಳುವಳಿಕೆ | ಮತ್ತಾಯ 13:15 |
| ಆಲೋಚನೆಗಳು | ಮತ್ತಾಯ 15:19 |
| ಪ್ರೀತಿ | ಮತ್ತಾಯ 22:37 |
| ಕಾರಣ | ಮಾರ್ಕ 2:6 |
| ಸಂಶಯ | ಮಾರ್ಕ 11:23 |
| ಆಂತರಿಕ ತೊಂದರೆ | ಯೋಹಾನ 14:1 |
| ದುಃಖ | ಯೋಹಾನ 16:6 |
| ಆನಂದಿಸುವುದು | ಯೋಹಾನ 16:22 |
| ಭಾವನೆಗಳನ್ನು ಹುಟ್ಟಿಸುವುದು | ಅಪೊಸ್ತಲರ ಕೃತ್ಯಗಳು 5:4 |
| ಉದ್ದೇಶ | ಅಪೊಸ್ತಲರ ಕೃತ್ಯಗಳು 8:22; ಇಬ್ರಿಯ 4:12 |
| ವಿಧೇಯತೆ | ರೋಮಾಪುರ 6:17 |
| ನಂಬುವುದು | ರೋಮಾಪುರ 10:9 |
| ತೀರ್ಮಾನಿಸುವುದು ಮತ್ತು ಸ್ಥಿರವಾಗಿ ನಿಲ್ಲುವುದು | 1 ಕೊರಿಂಥ 7:37 |
| ಉದ್ದೇಶಿಸುವುದು | 2 ಕೊರಿಂಥ 9:7 |
| ಆದರಣೆ | ಎಫೆಸ 6:22 |
| ಪ್ರೋತ್ಸಾಹ | ಕೊಲೊಸ್ಸೆ 2:2 |
| ಕೃತಜ್ಞತೆ | ಕೊಲೊಸ್ಸೆ 3:16 |
| ಸ್ವಯಂ - ದೋಷಾರೋಪಣೆ | 1 ಯೋಹಾನ 3:21 |

## ಕ್ರೈಸ್ತರಲ್ಲಿ ಪರಿಶುದ್ಧಾತ್ಮನು ಹೇಗೆ ವಾಸಿಸುವನು?

"ಅತ್ಮನು ಕ್ರೈಸ್ತರಲ್ಲಿ ವಾಸಿಸುವನೋ?" ಎಂಬುದು ಪ್ರಮುಖ ಪ್ರಶ್ನೆಯಾಗಿರುವದಿಲ್ಲ. ಅದು ಸಾಮಾನ್ಯವಾಗಿ ಒಪ್ಪಿಕೊಳ್ಳಲ್ಪಟ್ಟಿದೆ, "ಆತ್ಮನು ಹೇಗೆ ನಮ್ಮಲ್ಲಿ ವಾಸಿಸುವನು?" ಎಂಬ ಪ್ರಶ್ನೆಯು ಒಪ್ಪಿಕೊಳ್ಳದಿರುವದನ್ನು ಪ್ರಬೋಧಿಸುತ್ತದೆ. ಈ ಸಾಧ್ಯತೆಗಳನ್ನು ಗಮನಿಸಿರಿ:

(1) ವಾಕ್ಯದ ಸಾಧನದ ಮುಖಾಂತರ ಆತನು ವಾಸಿಸುತ್ತಾನೆ, ಆದರೆ ವ್ಯಕ್ತಿಯಾಗಿ ಅಲ್ಲ.

(2) ವಾಕ್ಯದೊಂದಿಗೆ ಆತನು ವಾಸಿಸುವವನು, ಆದರೆ ವ್ಯಕ್ತಿಯಲ್ಲಿ ವಾಸಿಸುವಂತೆ ಅಲ್ಲ.

(3) ಒಬ್ಬನಿಗೆ ಆತ್ಮನ ಮನೋಭಾವನೆಯಿರುವದರಿಂದ ಆತನು ವಾಸಿಸುತ್ತಾನೆ, ಆದರೆ ವ್ಯಕ್ತಿಯಾಗಿ ಅಲ್ಲ.

(4) ಒಬ್ಬನು ಆತ್ಮನ ಸ್ವಭಾವವನ್ನು ತೆಗೆದು ಕೊಳ್ಳುವ ಮಟ್ಟಕ್ಕೆ ಮಾತ್ರ ವಾಸಿಸುತ್ತಾನೆ, ಆದರೆ ವ್ಯಕ್ತಿಯಾಗಿ ಅಲ್ಲ.

(5) ಆತನು ಕ್ರೈಸ್ತನಲ್ಲಿ ವ್ಯಕ್ತಿಯಾಗಿ ವಾಸಿಸುತ್ತಾನೆ.

ಈ ಹೇಳಿಕೆಗಳಲ್ಲಿ ಪ್ರತಿಯೊಂದು ಸತ್ಯದ ಅಂಶವನ್ನು ಒಳಗೊಂಡಿರುವಂತೆ ತೋರುತ್ತದೆ. ಭಾಗಶಃ ಸತ್ಯಗಳು ಒಂದುಗೂಡಿಸಲ್ಪಡುವಾಗ, ಸಂಪೂರ್ಣ ಸತ್ಯವನ್ನು ಕಂಡುಕೊಳ್ಳಲು ನಾವು ಪ್ರಾರಂಭಿಸುವೆವು. ವಾಕ್ಯದ ಮುಖಾಂತರ ನಾವು ಹೊಸದಾಗಿ ಹುಟ್ಟುವಾಗ (1 ಪೇತ್ರ 1:23) ನಾವು ದೇವರ ಮಕ್ಕಳು ಆಗುವೆವು ಮತ್ತು ಪರಿಶುದ್ಧಾತ್ಮನು ನಮ್ಮ ಹೃದಯಗಳಲ್ಲಿ ಕಳುಹಿಸಲ್ಪಡುವನು. ಆತನು ಪ್ರತ್ಯೇಕವಾಗಿ ವಾಕ್ಯವನ್ನು ಬಿಟ್ಟು ವಾಸಿಸುವದಿಲ್ಲ, ಯಾಕಂದರೆ ವಾಕ್ಯವು ಹೋಗದೇ ಇರುವದಲ್ಲಿ ಆತನು ವಾಸಿಸುವದಿಲ್ಲ.

ನಾವು ನಂಬಬಾರದು ಮತ್ತು ರಕ್ಷಿಸಲ್ಪಡಬಾರದು ಎಂದು ನಮ್ಮ ಹೃದಯಗಳಲ್ಲಿ ಬಿತ್ತಲ್ಪಟ್ಟ ವಾಕ್ಯವನ್ನು ತೆಗೆದು ಹಾಕಲು ಸೈತಾನನು ಹುಡುಕುತ್ತಾನೆ (ಲೂಕ 8:12). ಪರಿಶುದ್ಧಾತ್ಮನ ಪ್ರವೇಶವಿಲ್ಲದೆ ವಾಕ್ಯವು ಒಬ್ಬನ ಹೃದಯದಲ್ಲಿ ಪ್ರವೇಶಿಸಬಹುದು ಎಂಬುದನ್ನು ಇದು ತೋರಿಸುತ್ತದೆ. ನಂಬಲಿಕ್ಕೆ ನಮಗೆ ವಾಕ್ಯವು ಸಹಾಯ ಮಾಡಬಹುದು (ರೋಮಾಪುರ 10:17), ಹಾಗೂ ನಂಬುವುದು ಕ್ಷಮಿಸಲ್ಪಡಲಿಕ್ಕೆ ಬಾಪ್ತಿಸ್ಮ ಹೊಂದಲು ನಮ್ಮನ್ನು ನಡಿಸಬಹುದು (ಅಪೊಸ್ತಲರ ಕೃತ್ಯಗಳು 2:38, 41; 8:12; 18:8). ಪ್ರತಿಯಾಗಿ, ಕ್ಷಮಾಪಣೆಯು ಆತ್ಮನನ್ನು ಸ್ವೀಕರಿಸುವದಕ್ಕೆ ನಡಿಸುವುದು. ಆದುದರಿಂದ ವಾಕ್ಯವು ನಮ್ಮಲ್ಲಿ ಪರಿಶುದ್ಧಾತ್ಮನು ವಾಸಿಸುವದಕ್ಕೆ ಮಧ್ಯಸ್ಥಗಾರನಾಗಿರುವದಿಲ್ಲ, ಯಾಕಂದರೆ ವಾಕ್ಯ ಮತ್ತು ಆತ್ಮನು ಭಿನ್ನವಾದ ಸಮಯದಲ್ಲಿ ಹೃದಯವನ್ನು ಪ್ರವೇಶಿಸುತ್ತಾರೆ. ನಾವು ರಕ್ಷಿಸಲ್ಪಡುವ ಮೊದಲು ವಾಕ್ಯವು ನಮ್ಮ ಹೃದಯವನ್ನು ಪ್ರವೇಶಿಸುತ್ತದೆ ಮತ್ತು ನಾವು ಕ್ಷಮಿಸಲ್ಪಟ್ಟು ದೇವರ ಮಕ್ಕಳಂತೆ ರಕ್ಷಿಸಲ್ಪಟ್ಟ ನಂತರ ಆತ್ಮನು ಪ್ರವೇಶಿಸುತ್ತಾನೆ.

ಪರಿಶುದ್ಧಾತ್ಮನು ವಾಕ್ಯದೊಂದಿಗೆ ವಾಸಿಸುತ್ತಾನೆ. ಕ್ರಿಸ್ತನ ಮಾತುಗಳು ಪರಿಶುದ್ಧಾತ್ಮನು ಮಾಡುವಂತೆ ಕ್ರೈಸ್ತನ ಹೃದಯದಲ್ಲಿ ನೆಲೆಗೊಂಡಿರುತ್ತವೆ (ಕೊಲೊಸ್ಸೆ 3:16). ವಾಕ್ಯ ಮತ್ತು ಆತ್ಮನು ಕ್ರೈಸ್ತರ ಹೃದಯಗಳಲ್ಲಿ ವಾಸಿಸುವ ಎರಡು ಪ್ರತ್ಯೇಕವಾದ ಅಸ್ತಿತ್ವಗಳಾಗಿವೆ.

ಕ್ರೈಸ್ತನಿಗೆ ಅವನ ಹೃದಯದಲ್ಲಿ ಸರಿಯಾದ ಮನೋಭಾವನೆಯಿರಬೇಕು (ಫಿಲಿಪ್ಪಿ 2:5). ಸರಿಯಾದ ಮನೋಭಾವನೆಗಳು ಪರಿಶುದ್ಧಾತ್ಮನ ಫಲವಾಗಿದೆ (ಗಲಾತ್ಯ 5:22, 23) ಯಾಕಂದರೆ ಪರಿಶುದ್ಧಾತ್ಮನು ನಮ್ಮ ಹೃದಯಗಳೊಳಗೆ ಸುರಿಸಲ್ಪಟ್ಟಿದ್ದಾನೆ (ರೋಮಾಪುರ 5:5). ಸರಿಯಾದ ಮನೋಭಾವನೆ ಹಾಗೂ ಪರಿಶುದ್ಧಾತ್ಮನು ಎರಡೂ ನಮ್ಮ ಹೃದಯಗಳಲ್ಲಿರತಕ್ಕದ್ದು. ಕ್ರಿಸ್ತನಂತಿರುವ ಮನೋಭಾವನೆಯು ಪರಿಶುದ್ಧಾತ್ಮನ ಸಂದೇಶದ ಪರಿಣಾಮವಾಗಿರುವುದು ಆದರೆ ಅದು ಪರಿಶುದ್ಧಾತ್ಮನು ತಾನೇ ಆಗಿರುವದಿಲ್ಲ. ಪರಿಶುದ್ಧಾತ್ಮನ ಬೋಧನೆಗಳನ್ನು ನಾವು ಅನುಸರಿಸಿದರೆ ನಮಗೆ ಪರಿಶುದ್ಧಾತ್ಮನ ಫಲವಿರುವುದು (ಗಲಾತ್ಯ 5:22-25), ಸರಿಯಾದ ಸ್ವಭಾವ ಮತ್ತು

ಪರಿಶುದ್ಧಾತ್ಮನು ಎರಡೂ ಕ್ರೈಸ್ತರಲ್ಲಿ ಇರಬೇಕು. ಸರಿಯಾದ ಸ್ವಭಾವವು ಪರಿಶುದ್ಧಾತ್ಮನ ಬೋಧನೆಯನ್ನು ಅನುಸರಿಸುವದರ ಫಲವಾಗಿದೆ ಆದರೆ ಪರಿಶುದ್ಧಾತ್ಮನು ತಾನೇ ಆಗಿರುವದಿಲ್ಲ.

ಇವುಗಳಲ್ಲಿ ಪ್ರತಿಯೊಂದರಲ್ಲಿ ಪರಿಶುದ್ಧಾತ್ಮನ ಕಾರ್ಯವು "either/or" ಆಗಿರುವದಿಲ್ಲ ಆದರೆ "both/and" ಆಗಿರುತ್ತದೆ. ಪರಿಶುದ್ಧಾತ್ಮ ಹಾಗೆಯೇ ವಾಕ್ಯವು, ಪರಿಶುದ್ಧಾತ್ಮನ ಸ್ವಭಾವ ಮತ್ತು ಮನೋಭಾವನೆಯು ನಮ್ಮೊಂದಿಗಿರುವದರೊಂದಿಗೆ - ಹೃದಯದಲ್ಲಿ ವಾಸಿಸುತ್ತಾನೆ.

1 ಕೊರಿಂಥ 6:19 ಪರಿಶುದ್ಧಾತ್ಮನು ನಮ್ಮಲ್ಲಿ ಹೇಗೆ ನೆಲೆಗೊಂಡಿರುತ್ತಾನೆ ಎಂಬುದನ್ನು ಅರ್ಥಮಾಡಿಕೊಳ್ಳುವಲ್ಲಿ ಮಹತ್ವದ ಪರಿಶುದ್ಧ ಬರಹವಾಗಿದೆ. ಪರಿಶುದ್ಧಾತ್ಮನು ನಮ್ಮ ದೇಹಗಳಲ್ಲಿ ಇರುವ ಕಾರಣದಿಂದ ನಮ್ಮ ದೇಹಗಳನ್ನು ಸೂಳೆಯರೊಂದಿಗೆ ಸೇರಿಸ ಬಾರದೆಂದು ಪೌಲನು ಬರೆದನು (1 ಕೊರಿಂಥ 6:15-19). ಕೊಡಲ್ಪಟ್ಟ ಸಂಕೇತವು "ದೇಹವು ನಿಮ್ಮಲ್ಲಿರುವ ಪರಿಶುದ್ಧಾತ್ಮನ ಆಲಯವಾಗಿದೆ" ಎಂಬುದು. ದೇವರುಗಳು ನೆಲೆಗೊಂಡಿರುವರು ಎಂದು ತಿಳಿದ ಆಲಯಗಳ ಬಗ್ಗೆ ಕೊರಿಂಥದವರು ಪರಿಚಯವುಳ್ಳವರಾಗಿದ್ದರು. ಪರಿಶುದ್ಧಾತ್ಮನು, ಕೈಗಳಿಂದ ಕಟ್ಟಲ್ಪಟ್ಟ ಆಲಯಗಳಲ್ಲಿ ವಾಸಿಸುವದರ ಬದಲು (ಅಪೊಸ್ತಲರ ಕೃತ್ಯಗಳು 17:24) ಆತನು ಶರೀರದ, ಮಾನವ ದೇಹದ ಆಲಯದಲ್ಲಿ ನೆಲೆಗೊಂಡಿರುವನು ಎಂದು ಪೌಲನು ಬರೆದದ್ದನ್ನು ಅವರು ಬೇಗನೇ ಅರ್ಥಮಾಡಿಕೊಂಡಿದ್ದಿರ ಬೇಕು.

ನಾವು ದೇವರ ಮಕ್ಕಳಾಗಿದ್ದರೆ ನಮ್ಮಲ್ಲಿ ಪರಿಶುದ್ಧಾತ್ಮನು ಇರುವನು. ವಿಶ್ವಾಸದ ಮುಖಾಂತರ ಕ್ರಿಸ್ತನಲ್ಲಿ ನಾವು ಬಾಪ್ತಿಸ್ಮ ಹೊಂದಿದಾಗ ದೇವರ ವಾಕ್ಯದಿಂದ ಹೊಸದಾಗಿ ಹುಟ್ಟಿದ್ದಾಗ ನಾವು ದೇವರ ಮಕ್ಕಳಾಗುತ್ತೇವೆ (ಗಲಾತ್ಯ 3: 26, 27). ಆತ್ಮನನ್ನು ಕೊಡುವುದು ದೇವರ ವಾಕ್ಯವನ್ನು ಸ್ವೀಕರಿಸುವಂತೆ ಇರುವದಿಲ್ಲ; ಅದು ನಮ್ಮೊಳಗೆ ಏನನ್ನಾದರೂ ನಾವು ಸ್ವೀಕರಿಸುವಂಥದ್ದು, ಕಲಿತು ಕೊಳ್ಳುವಂಥದ್ದು ಇಲ್ಲವೇ ನಮ್ಮಲ್ಲಿಯೇ ಬೆಳಸಿಕೊಳ್ಳುವಂಥದ್ದು ಆಗಿರುವದಿಲ್ಲ. ದೇವರು ನಮಗೆ ಆತ್ಮನನ್ನು ಕೊಡುತ್ತಾನೆ (ಲೂಕ 11:13; ಅಪೊಸ್ತಲರ ಕೃತ್ಯಗಳು 5:32; ರೋಮಾಪುರ 5:5; 1 ಕೊರಿಂಥ 6:19; 1 ಥೆಸಲೊನೀಕ 4:8; 1 ಯೋಹಾನ 3:24). ನಾವು ಆತನ ಮಕ್ಕಳಾಗಿರುವದರಿಂದ ದೇವರು ಆತನನ್ನು ನಮ್ಮ ಹೃದಯದೊಳಗೆ ಕಳುಹಿಸುತ್ತಾನೆ.

ನಮ್ಮಲ್ಲಿ ಆತ್ಮನು ಹೇಗೆ ವಾಸಿಸುತ್ತಾನೆ ಎಂಬುದನ್ನು ಬೈಬಲ್ ನಮಗೆ ಹೇಳದೇ ಇರುವದರಿಂದ, ಬೈಬಲ್ ಎಲ್ಲಿ ಮಾತಾಡುವದಿಲ್ಲವೋ ಅಲ್ಲಿ ಮಾತಾಡದೇ ಆತ್ಮನು ಹೇಗೆ ವಾಸಿಸುವನು ಎಂಬುದನ್ನು ಭರವಸೆಯಿಂದ ನಾವು ಒಪ್ಪಿಕೊಳ್ಳಲಾರೆವು. ನಮ್ಮ ಆತ್ಮಗಳು ನಮ್ಮಲ್ಲಿ ಹೇಗೆ ವಾಸಿಸುತ್ತವೆ ಎಂಬುದನ್ನು ನಾವು ತಿಳಿದಿರುವದಿಲ್ಲ - ನಮ್ಮ ಆತ್ಮಗಳು ನಮ್ಮಲ್ಲಿ ಇರುವದರಿಂದ ನಮಗೆ ದೈಹಿಕ ಜೀವವಿರುತ್ತದೆ. ಇಲ್ಲದಿದ್ದರೆ, ನಾವು ಸತ್ತವರಾಗುತ್ತೇವೆ (ಯಾಕೋಬ 2:26). ಅವರಂತೆ, ಪರಿಶುದ್ಧಾತ್ಮನು ನಮ್ಮಲ್ಲಿ ಇರುವದರಿಂದ ನಮಗೆ ಆತ್ಮಿಕ ಜೀವವಿರುತ್ತದೆ. ಈ ಸಂಗತಿಯನ್ನು ನಾವು ವಿಶ್ವಾಸದ ಮುಖಾಂತರ ಸ್ವೀಕರಿಸತಕ್ಕದ್ದು.

ಯೇಸುವು ಮಾನವ ದೇಹದಲ್ಲಿ ದೇವತ್ವವಾಗಿದ್ದಂತೆ ಪರಿಶುದ್ಧಾತ್ಮನು ನಮ್ಮಲ್ಲಿ ವಾಸಿಸಿದರೆ ಆಗ ನಮಗೆ ಮಾನವ ದೇಹದಲ್ಲಿ ದೇವತ್ವವಿರುವುದೆಂಬುದನ್ನು ಕೆಲವರು ಆಕ್ಷೇಪಿಸಿದ್ದಾರೆ. ಇದರಿಂದ ಇತರರು ನಮಗೆ ತಲೆಬಾಗಿಸಿ ನಮ್ಮನ್ನು ಆರಾಧಿಸ ಬೇಕಾಗುತ್ತದೆ ಎಂದು ಹೇಳುತ್ತಾರೆ. ಪರಿಶುದ್ಧಾತ್ಮನು ಕ್ರೈಸ್ತರಲ್ಲಿ ಚಿಕ್ಕ ತುಂಡುಗಳಾಗಿ ಮತ್ತು ಭಾಗಗಳಾಗಿ ಹಂಚಲ್ಪಡಲಿಕ್ಕಾಗದಂಥ ವ್ಯಕ್ತಿಯಾಗಿದ್ದಾನೆಂದು ಆಕ್ಷೇಪಿಸುತ್ತಾರೆ.

ಹೀಗೆ ಆಕ್ಷೇಪಿಸುವವರಲ್ಲಿ ಹೆಚ್ಚಾದವರು ಪರಿಶುದ್ಧಾತ್ಮನು ಪ್ರವಾದಿಗಳಲ್ಲಿ ಮತ್ತು ಅಪೊಸ್ತಲರಲ್ಲಿ ಇದ್ದನು ಎಂದು ಒಪ್ಪಿಕೊಳ್ಳುತ್ತಾರೆ. ಆತನು ಈ ಜನರಲ್ಲಿದ್ದರೆ, ಈ ತರ್ಕದ ಪ್ರಕಾರ ಅಪೊಸ್ತಲರು ಮತ್ತು ಪ್ರವಾದಿಗಳು ಆರಾಧಿಸಲ್ಪಟ್ಟಿರ ಬೇಕು ಹಾಗೂ ಪರಿಶುದ್ಧಾತ್ಮನು ಚಿಕ್ಕ ಭಾಗಗಳಲ್ಲಿ ವಿಭಾಗಿಸಲ್ಪಟ್ಟಿರಬೇಕು ಎಂದಾಗುತ್ತದಲ್ಲವೇ? ದೇವರು ತನ್ನ ವಿಶ್ವಾಸದಲ್ಲೆಲ್ಲಾ ಇದ್ದರೆ (ಕೀರ್ತನೆ 139:7-12), ಆತ್ಮನ ಮುಖಾಂತರ ತನ್ನ ಮಕ್ಕಳಲ್ಲಿ ಆತನು ಇರಲಾರನೋ? ದೇವರು ಸಮುದ್ರದ ಅತೀ ದೂರದ ಭಾಗದಲ್ಲಿದ್ದರೆ (ವಚನ 9), ನಾವು ಸಮುದ್ರವನ್ನು ಆರಾಧಿಸಬೇಕೆಂದು ಅರ್ಥವಾಗುವುದೋ? ನಿಶ್ಚಯವಾಗಿಯೂ ಇಲ್ಲ.

## ಮುಕ್ತಾಯ

ಕ್ರೈಸ್ತರು ಲೋಕದಲ್ಲಿ ಲೋಕದಿಂದ ಜಯಿಸಲ್ಪಡದೆ ಜೀವಿಸಲಿಕ್ಕಾಗುವಂತೆ ಕ್ರೈಸ್ತರಿಗೆ ಪರಿಶುದ್ಧಾತ್ಮನು ಕೊಡಲ್ಪಟ್ಟಿದ್ದಾನೆ. ಇದರ ಅರ್ಥ ಪರಿಶುದ್ಧಾತ್ಮನು ಅವರಿಗೆ ಮಾರ್ಗದರ್ಶನಗಳನ್ನೂ ಭಾವನೆಗಳನ್ನೂ ಇಲ್ಲವೇ ನೇರವಾದ ಮಾರ್ಗದರ್ಶನವನ್ನೂ ಕೊಡುವನೆಂದಾಗುವದಿಲ್ಲ. ಅಪೊಸ್ತಲರು ಮತ್ತು ಆತ್ಮನಿಂದ ವಿಶೇಷವಾಗಿ ಬಲಹೊಂದಿದ ಇತರ ಆದಿ ಕ್ರೈಸ್ತರು ಮಾಡಿದಂತೆ ಅವರು ಸೂಚಕ ಕಾರ್ಯಗಳನ್ನೂ ಅದ್ಭುತಕಾರ್ಯಗಳನ್ನೂ ಮಾಡುವರೆಂದು ಅದು ಸೂಚಿಸುವದಿಲ್ಲ. ಹೀಗಿದ್ದರೂ ಪರಿಶುದ್ಧಾತ್ಮನ ಅದ್ಭುತಕಾರ್ಯಗಳಿಲ್ಲದ ಕೃತ್ಯಗಳ ಮುಖಾಂತರ ಇಂದು ಕ್ರೈಸ್ತರು ಸೈತಾನನಿಂದ ಪ್ರಭಾವಿತವಾದ ಜಗತ್ತಿನಲ್ಲಿ ಜಯಶಾಲಿಗಳಾಗಿ ಜೀವಿಸಬಹುದು (ಎಫೆಸ 3:16; 1 ಯೊಹಾನ 4:4; 5:19).

---

ಟಿಪ್ಪಣಿಗಳು

[1]ಇತರ ವಾಕ್ಯಭಾಗಳೂ ಸಹ ಪರಿಶುದ್ಧಾತ್ಮನು ನಮಗೆ ಕೊಡಲ್ಪಡುವನು ಎಂಬುದನ್ನು ಪ್ರತಿಬಿಂಬಿಸುತ್ತವೆ. "... ನಮಗೆ ಅನುಗ್ರಹಿಸಿದ ಆತ್ಮನಿಂದಲೇ ..." ಎಂದು 1 ಯೊಹಾನ 3:24 ಹೇಳುತ್ತದೆ. ಲೇಖಕ ಮತ್ತು ವಾಚಕರು ಇಬ್ಬರನ್ನೂ ಕೂಡಿಸಲು "ನಮಗೆ" ಎಂಬುದು ಮೊದಲು ಉಪಯೋಗಿಸಲ್ಪಟ್ಟದ್ದರಿಂದ (3:16, 18, 20), ಇಲ್ಲಿ ಕೇವಲ ಅಪೊಸ್ತಲರಿಗೆ ಮಾತ್ರವೇ ಸಂಬಂಧಿಸಿರುವದಿಲ್ಲ. 1 ಯೋಹಾನ 4:13ರಲ್ಲಿ "... ನಮಗೆ ತನ್ನ ಆತ್ಮದಲ್ಲಿ ಪಾಲನ್ನು ಅನುಗ್ರಹಿಸಿದ್ದರಿಂದ ..." ಎಂದು ಓದುತ್ತೇವೆ. ಪುನಃ, "ನಮಗೆ" ಎಂಬುದು ಲೇಖಕನನ್ನೂ ವಾಚಕರನ್ನೂ ಒಳಗೊಂಡಿರುತ್ತದೆ (ವಚನ 12 ಗಮನಿಸಿರಿ). [2]F. F. Bruce, *Commentary on the Book of the Acts* (Grand Rapids, Mich.: Wm. B. Eerdmans Publishing Co., 1986), 77. [3]J. W. McGarvey, *New Commentary on Acts of Apostles,* vol. 1 (N.p.: 1892; reprint, Delight, Ark.: Gospel Light Publishing Co., n.d.), 39. [4]Owen D. Olbricht, *Baptism: New Birth or Empty Ritual?* (Delight, Ark.: Gospel Light Publishing Co., 1994), 144.

© 2009 Truth for Today

## ಪರಿಶುದ್ಧಾತ್ಮನ ಕೊಡುವಿಕೆ

| | ಪರಿಶುದ್ಧಾತ್ಮನ ಬಾಪ್ತಿಸ್ಮ | ಅಪೊಸ್ತಲರ ಹಸ್ತಗಳನ್ನಿಡುವುದು | ಪರಿಶುದ್ಧಾತ್ಮನು ಅಂತರ್ಯದಲ್ಲಿ ವಾಸಿಸುವುದು |
|---|---|---|---|
| ಯಾರು? | ಆಯ್ದ ಕೆಲವರು: ಅಪೊಸ್ತಲರು ಮತ್ತು ಕೊರ್ನೇಲ್ಯ (ಮತ್ತು ಪೌಲ?) ಅಪೊಸ್ತಲರ ಕೃತ್ಯಗಳು 2; 10 | ಕೆಲವು ಮೊದಲನೆ ಶತಮಾನದ ಕ್ರೈಸ್ತರು ಅಪೊಸ್ತಲರ ಕೃತ್ಯಗಳು 8:12-18; 19:6 | ಎಲ್ಲಾ ಕ್ರೈಸ್ತರು ಅಪೊಸ್ತಲರ ಕೃತ್ಯಗಳು 2:38; 5:32; ಗಲಾತ್ಯ 4:6 |
| ಹೇಗೆ? | ಕ್ರಿಸ್ತ ಮತ್ತಾಯ 3:11; ಯೋಹಾನ 1:33 | ಅಪೊಸ್ತಲರು ಅಪೊಸ್ತಲರ ಕೃತ್ಯಗಳು 8:18; 19:6; ರೋಮಾಪುರ 1:11; 2 ತಿಮೊಥೆ 1:6 | ನೀರಿನ ಬಾಪ್ತಿಸ್ಮದ ಸಮಯದಲ್ಲಿ ದೇವರಿಂದ ಸ್ವೀಕರಿಸಲ್ಪಟ್ಟಿತು ಅಪೊಸ್ತಲರ ಕೃತ್ಯಗಳು 2:38; 5:32 |
| ಏನನ್ನು? | ಅದ್ಭುತಕರವಾದ ಶಕ್ತಿಯನ್ನು ಅಪೊಸ್ತಲರ ಕೃತ್ಯಗಳು 2; 10 | ಮಿತಿಯುಳ್ಳ ಅದ್ಭುತಕರವಾದ ಶಕ್ತಿಯನ್ನು 1 ಕೊರಿಂಥ 12:1-10 | ಅದ್ಭುತಕರವಾದದ್ದನ್ನು ಅಲ್ಲ; ಪುತ್ರತ್ವದ ವಾಗ್ದಾನವನ್ನು ಎಫೆಸ 1:12-14 |
| ಯಾಕೆ? | ದೇವರ ಸತ್ಯವನ್ನು ಪ್ರಕಟಿಸಲು ಮತ್ತು ದೃಢಪಡಿಸಲು ಯೋಹಾನ 14:26; 1 ಕೊರಿಂಥ 2:13 | ಹೊಸ ಒಡಂಬಡಿಕೆ ಪೂರ್ತಿ ಯಾಗುವವರೆಗೆ ಸಭೆಯನ್ನು ಪೋಷಿಸಲು ಅಪೊಸ್ತಲರ ಕೃತ್ಯಗಳು 12-17; ಇಬ್ರಿಯ 2:3, 4 | ಕ್ರೈಸ್ತರಿಗೆ ಸಹಾಯ ಮಾಡಲಿಕ್ಕೆ ಮತ್ತು ಬಲಪಡಿಸಲಿಕ್ಕೆ ರೋಮಾಪುರ 8:9-11, 13-15, 26, 27 |
| ಯಾವಾಗ? | ಕ್ರಿ.ಶ. 61-63 ಸುಮಾರಿಗೆ ನಿಂತು ಹೋಯಿತು ಎಫೆಸ 4:5 | ಅಪೊಸ್ತಲರು ಮತ್ತು ಸ್ವೀಕರಿಸಿದವರು ಸತ್ತು ಹೋದಾಗ ನಿಂತು ಹೋಯಿತು 1 ಕೊರಿಂಥ 13:8-13 | ಮುಂದುವರಿಯುವುದು ಅಪೊಸ್ತಲರ ಕೃತ್ಯಗಳು 2:38; 5:32; ರೋಮಾಪುರ 8:9; ಗಲಾತ್ಯ 4:6 |



© 2009 Truth for Today